O.S. No- 101/2020

Pw-1

<u>ದಿನಾಂಕಃ11-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲುಃ- ಶ್ರೀ ಎಸ್ ವಿ ಕೆ 1 ನೇ ಪ್ರತಿವಾದಿ ಪರ ವಕೀಲರಿಂದ-**

ನಾನು ಈ ದಾವೆಯನ್ನು ಆಸ್ತಿ ನಂಬರ 291 ಕ್ಕೆ ಸಂಬಂದಿಸಿದಂತೆ ಹುಡಿರುತ್ತೇನೆ . ಸದರಿ ಆಸ್ತಿಯು ಮೂಲತಃ ನನ್ನ ದೊಡ್ಡಪ್ಪನಾದ ಶಿವರಾಯ ಅಗನಪ್ಪಾ ಚೌರಿ ರವರಿಗೆ ಸೇರಿತ್ತು . ತದನಂತರ 1988 ನೇ ಸಾಲಿನಲ್ಲಿ ಸದರಿ ಆಸ್ತಿಯನ್ನು ನನ್ನ ತಂದೆ ಬಸಲಿಂಗಪ್ಪಾ ಚೌರಿ , ದಶರಥ ಚೌರಿ , ಅರ್ಜುನ ಚೌರಿ ರವರಿಗೆ ಬಿಟ್ಟು ಕೊಟ್ಟಿರುತ್ತಾರೆ . ತದನಂತರ 1989 ನೇ ಸಾಲಿನಲ್ಲಿ ಅರ್ಜುನ ಚೌರಿ ರವರು ಬೇರೆಯಾದ ಕಾರಣ ಸದರಿ ಆಸ್ತಿಯನ್ನು ನನ್ನ ತಂದೆ ಬಸಲಿಂಗಪ್ಪಾ ಚೌರಿ ಮತ್ತು ದಶರಥ ರವರಿಗೆ ಬಿಟ್ಟು ಕೊಟ್ಟಿರುತ್ತಾರೆ . ಮೂಲತಃ ತಂದೆ ಮತ್ತು 7 ಜನ ಅಣ್ಣತಮ್ಮಂದಿಗೆ ಸದರಿ ಆಸ್ತಿ ಸೇರಿತ್ತು . ಸದರಿ ಕಾಲಕ್ಕೆ ಸಂಗಪ್ಪಾ ರವರಿಗೆ ಒಂದು ಮನೆ ಕೊಟ್ಟಿದ್ದು ಮತ್ತು ನನ್ನ ತಂದೆ ಹಾಗೂ ಅಣ್ಣತಮ್ಮಂದಿರಿಗೆ ಸೇರಿ ಹೋಲಗಳಲ್ಲಿ ಹೆಚ್ಚಿಗೆ ಪಾಲು ಕೊಟ್ಟಿದ್ದ ಕಾರಣ ದಾವಾ ಆಸ್ತಿನ್ನು ದಶರಥ ರವರಿಗೆ ಮಾತ್ರ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಬಸಲಿಂಗಪ್ಪಾ ಇವರು 1988 ನೇ ಸಾಲಿನಲ್ಲಿ 50 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ದಾವಾ ಸ್ವತ್ತಿನಲ್ಲಿ ತನ್ನ ಅರ್ದ ಬಾಗವನ್ನು ಬಿಟ್ಟು ಕೊಟ್ಟ ಬಗ್ಗೆ ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವದಿಲ್ಲ . ಬಸಲಿಂಗಪ್ಪಾ ಇವರು 50 ರೂಪಾಯಿ ಬಾಂಡ ಪೇಪರ ಮೇಲೆ ಹಕ್ಕು ಬಿಟ್ಟು ಪತ್ರ ಮಾಡಿ ತೋದಲಬಾಗಿ ಗ್ರಾಮ ಪಂಚಾಯತಿಗೆ ನೀಡಿದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವದಿಲ್ಲ . ದಾವಾ ಆಸ್ತಿ 1988 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ 2008 ನೇ ಸಾಲಿನಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯದು ಮುಂದುವರೆದು 1988 ನೇ ಸಾಲಿನಲ್ಲಿ ನನ್ನ ತಂದೆಯ ಹೆಸರು ಮತ್ತು ಎಲ್ಲರ ಹೆಸರು ಸಹ ಸದರಿ ಆಸ್ತಿಯ ಮೇಲೆ ಇತ್ತು ಎಂದು ನುಡಿಯುತ್ತಾರೆ . 2018-19 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯವರು ತನ್ನ ಹೆಸರಿನಲ್ಲಿ ಸಂಪೂರ್ಣವಾದ ದಾವಾ ಸ್ವತ್ತುನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . 2008 ನೇ ಇಸ್ವೀಯಲ್ಲಿ ಅದ ಠರಾವು ಆಧಾರ ಮೇರೆಗೆ 2018-19 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ದಾವಾ ಸ್ವತ್ತುನ್ನು ಮಾಡಿಕೊಂಡಿರುತ್ತಾರೆ . ಅದರ ಬಗ್ಗೆ ದಾಖಲಾತಿ ಎಂದರೆ ಗಣಕಯಂತ್ರದ ಉತಾರೆಯನ್ನು ನಾನು ಹಾಜರು ಪಡಿಸಿರುತ್ತೇನೆ . 2008 ನೇ ಸಾಲಿನಲ್ಲಿ ಆಗಿರುವ ಠರಾವು ತಪ್ಪು ಆಗಿರುವದಿಲ್ಲ , ಅದು

ಸರಿಯಾಗಿ ಇರುತ್ತದೆ .

ಆ ಕಾಲಕ್ಕೆ ಪಂಚಾಯಿತಿಯವರಿಗೆ ನನ್ನ ತಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಆ ಕಾಲಕ್ಕೆ ನನ್ನ ಕಾಕಾ ದಶರಥ ಇವರು ತನ್ನ ಹಕ್ಕನ್ನು ಬಿಟ್ಟು ಕೊಡುತ್ತಾರೆಂದು ನನ್ನ ತಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಅದರ ಅನುಗುಣವಾಗಿ 2008 ನೇ ಸಾಲಿನಲ್ಲಿ ಅಂಗೀಕಾರವಾದ ಠರಾವು ಸರಿಯಾಗಿ ಇರುತ್ತದೆ . ಸದರಿ ಠರಾವು ಅಧಾರದ ಮೇರೆಗೆ ದಶರಥ ರವರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ . 2008 ನೇ ಸಾಲಿನಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿ ಸದರಿ ದಾವಾ ಆಸ್ತಿಯ ಕಬ್ಜಾ ಮತ್ತು ವಹಿವಾಟದಲ್ಲಿ ಇರುತ್ತಾರೆಂದರೆ ಸಾಕ್ಷಿ ನಾವೇ ಇರುತ್ತೇವೆ ಎಂದು ನುಡಿಯುತ್ತಾರೆ . ನಾನು 2008 ನೇ ಸಾಲಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದ ಬಗ್ಗೆ ತೋರಿಸಲು ಗ್ರಾಮ ಪಂಚಾಯತಿಯಿಂದ ತೆರಿಗೆ ರಶೀದಿಗಳು , ಮತ್ತು ದಾಖಲೆಗಳು ಹಾಜರು ಪಡಿಸಲು ಆಗುವದಿಲ್ಲ . 2008 ನೇ ಸಾಲಿನಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿಯವರು ದಾವಾ ಆಸ್ತಿಯ ಕಬ್ಜಾ ವಹಿವಾಟದಲ್ಲಿ ಇದ್ದರೂ ಸಹ ನಾನು ಸದರಿ ಆಸ್ತಿಯ ಕಬ್ಜಾ ವಹಿವಾಟದಲ್ಲಿ ಇದ್ದೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . 2008 ನೇ ಸಾಲಿನಲ್ಲಿ ಅಂಗೀಕಾರವಾದ ಠರಾವು ಅಧಾರದ ಮೇಲೆ 1 ನೇ ಪ್ರತಿವಾದಿವರಿಗೆ ಮಾಲೀಕತ್ವದ ಹಕ್ಕು ಬಂದಿದ್ದು ಇರುತ್ತದೆ ಎಂದರೆ ಸಾಕ್ಷಿ 2008 ನೇ ಸಾಲಿನಲ್ಲಿ ನನ್ನ ತಂದೆಯವರು ಇದ್ದರು ಎಂದು ನುಡಿಯುತ್ತಾರೆ .

2008 ನೇ ಸಾಲಿನಲ್ಲಿ ಆಗಿರುವ ಠರಾವುನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಮತ್ತು ಅರ್ಜಿಗಳನ್ನು ಸಲ್ಲಿಸಿರುವದಿಲ್ಲ ನೇರವಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ . ನನ್ನ ವಾದ ಪತ್ರದ 6 ನೇ ಕಂಡಿಕೆಯಲ್ಲಿ ದಿನಾಂಕ 07-11-2008 ರಲ್ಲಿ ಆಗಿರುವ ಠರಾವು ನನಗೆ ಬಂದನಕಾರಿಕ ಆಗಿರುವದಿಲ್ಲ ಎಂದು ಬರೆಸಿರುವ ಮಾತು ಸರಿಯಾಗಿದೆ ಎಂದು ನುಡಿಯುತ್ತಾರೆ . ಯಾವ ಖೋಟ್ಟಿ ದಾಖಲಾತಿಯ ಆಧಾರದ ಮೇರೆಗೆ ಸದರಿ ಠರಾವು ಅಂಗೀಕಾರ ಆಗಿದ್ದ ಬಗ್ಗೆ ನನಗೆ ಹೇಳಲು ಬರುವದಿಲ್ಲ . ನಾನು ಈ ದಾವೆಯಲ್ಲಿ ಗ್ರಾಮ ಪಂಚಾಯತಿ ರವರಿಗೆ ಪಕ್ಷಗಾರರಾಗಿ ಸೇರಿಸಿರುವದಿಲ್ಲ . ದಾವಾ ಹುಡುವ ಕಾಲಕ್ಕೆ ದಾವಾ ಆಸ್ತಿಯ ಕಿಮ್ಮತ್ತು 50 ಸಾವಿರ ದಿಂದ 1 ಲಕ್ಷ ವರೆಗೆ ಆಗಬಹುದು . ನಾನು ಈ ದಾವೆಯಲ್ಲಿ ಶಿವರಾಯ ಮತ್ತು ಅರ್ಜುನರವರಿಗೆ ಪಕ್ಷಗಾರರಾಗಿ ಸೇರಿರುವದಿಲ್ಲ ಎಂದರೆ ಸರಿಯಲ್ಲ . 2008 ನೇ ಸಾಲಿನಲ್ಲಿ ನನ್ನ ತಂದೆ ದಾವಾ ಆಸ್ತಿಯ ಮೇಲೆ ಹಕ್ಕು ಬಿಟ್ಟದ ಕಾರಣ ಅಂದಿನಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿಗೆ ದಾವಾ ಆಸ್ತಿಯ ಕಬ್ಜಾ ವಹಿವಾಟದಲ್ಲಿ ಇದ್ದು ನನಗೆ ದಾವಾ ಆಸ್ತಿಯ ಮೇಲೆ ಹಕ್ಕು ವ ಅಧಿಕಾರ ಇರುವದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಃ- ಇಲ್ಲಾ

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ
sd/-
ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು ಜಮಖಂಡಿ